ಎಂದೋ ಒಂದೊಂದು ದಮ್ಮು ಎಳೆದು ಮುಂದಿನ ತತ್ವಕ್ಕೆ ರೆಡಿಯಾದರು.

ಇಲ್ಲಿಗೆ ನಾನು ಯಾಕೆ ಬಂದೆ ಎಂಬುದು ಕೂಡ ಗೊತ್ತಿಲ್ಲದೆ ಇವರೆಲ್ಲರ ನಡುವೆ ಬಹಳ ಹೊತ್ತಿನಿಂದ ಕೂತಿದ್ದ ಗುರುಸ್ವಾಮಿ ಇದ್ದೂ ಇಲ್ಲದಂತಿದ್ದ. ಅವನಿಗೆ ಇಲ್ಲಿಗೆ ಬರುವ ಉದ್ದೇಶವೂ ಇರಲಿಲ್ಲ, ಇಲ್ಲಿ ನಡೆಯುತ್ತಿರುವುದು ಏನು ಎಂಬುದೂ ಗೊತ್ತಿರಲಿಲ್ಲ. ಅಲ್ಲಿರಲಾರದ್ದಕ್ಕೆ ಇಲ್ಲಿಗೆ ಬಂದಿದ್ದ. ಬೆಳಗಿನಿಂದ ಮನೆಯಲ್ಲಿ ಇರಲು ಎಷ್ಟು ಪ್ರಯತ್ನಿಸಿದರೂ ಎಲ್ಲಿಗಾದರೂ ಸರಿ ಹೋಗಿಬಿಡಬೇಕೆನ್ನಿಸಿತ್ತು. 'ನೀನು ನನಗೆ ಬೇಕು' ಎನ್ನುವ ಯಾವ ಜೀವವೂ ಲೋಕದಲ್ಲಿ ಕಾಣಲಿಲ್ಲ. ಈ ಲೋಕದಿಂದ ಕಳಚಿಕೊಳ್ಳುವ ದಾರಿ ಹುಡುಕಬೇಕೆಂದು ಬಂದವನು ಊರ ವರಚ್ಚಿನಲ್ಲಿದ್ದ ಅಜ್ಜಯ್ಯನ ಗದ್ದುಗೆ ಕಡೆಗೆ ತನಗೆ ಗೊತ್ತಿಲ್ಲದೇ ಬಂದಿದ್ದ. ಈ ಮೊದಲು ಗದ್ದುಗೆಯನ್ನು ಗಮನಿಸಿದ್ದರೂ ಎಂದೂ ಇದರ ಆಸು ಪಾಸಿಗೂ ಸುಳಿದವನಲ್ಲ. ಎಂದೂ ಹೋಗದ ಜಾಗಕ್ಕೆ ಹೋಗಬೇಕೆನ್ನಿಸಿದ್ದಕ್ಕೆ ಇಲ್ಲಿಗೆ ಬಂದನೋ ಏನೋ ಅವನಿಗೂ ಗೊತ್ತಿರಲಿಲ್ಲ. ಇಲ್ಲಿಗೆ ಬಂದಾಗ ನೀನು ಯಾರಪ್ಪಾ ಎಂದು ಯಾರೂ ಕೇಳಲಿಲ್ಲ; ಬದಲಿಗೆ ಕೂರಲು ಜಾಗ ಬಿಟ್ಟರು, ಎಲೆಯಲ್ಲಿದ್ದ ಕಲ್ಲುಸಕ್ಕರೆ ತುಂಡನ್ನು ಅವನ ಮುಂದಕ್ಕೆ ತಳ್ಳಿದರು. ಒಂದೆರಡು ಗೊದ್ದಗಳು ಕಲ್ಲುಸಕ್ಕರೆಯ ಸಣ್ಣ ತುಂಡುಗಳನ್ನು ಎಳೆದುಕೊಂಡು ಹೋಗುತ್ತಿದ್ದವು. ಅವರ್‍ಯಾರೂ ಅವುಗಳನ್ನು ಓಡಿಸಲಿಲ್ಲ. ತತ್ವ ಭಜನೆ ತಾರಕದಲ್ಲಿ ನಡೆಯುತ್ತಿತ್ತು.

